ಆಯವ್ಯಯ ನಿಗದಿಯಲ್ಲಿ ವಲಯವಾರು ಹಂಚಿಕೆ ಮಾಡಲಾಗಿದೆ ಮತ್ತು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆ ಮಾಡಿಲ್ಲ.

ಶ್ರೀ ಎ. ನಾಗರಾಜ್.—ಪಿಶ್ವಬ್ಯಾಂಕ್‌ನಿಂದ ಪಡೆದಂಥ ನೆರವಿನಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕ್‌ನಲ್ಲಿ ಕಡಿಮೆ ಹಣ ಖರ್ಚು ಮಾಡಿದ್ದೀರಿ. ಇನ್ನು ಮುಂದೆ ಆದರೂ ನಮ್ಮ ಮಾಲೂರು ತಾಲ್ಲೂಕ್‌ನಲ್ಲಿ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಈ ಹಣವನ್ನು ಇಂತಹ ಒಂದು ತಾಲ್ಲೂಕ್‌ಗೆ ಇಲ್ಲವೇ ಇಂತಹ ಒಂದು ಜಿಲ್ಲೆಗೆ ಖರ್ಚು ಮಾಡಬೇಕೆಂದು ನಿಗದಿ ಮಾಡಿಲ್ಲ. ಏನಿದ್ದರೂ ಆಯಾ ಸ್ಥಳದಲ್ಲಿರುವ ರೈತರ ಮತ್ತು ನೂಲುಗಾರರ ಅಗತ್ಯವನ್ನು ನೋಡಿಕೊಂಡು ಹಣವನ್ನು ಖರ್ಚು ಮಾಡಲಾಗುತ್ತಿದೆ. ಈಗ ಮಾಲೂರಿನಲ್ಲಿ ೧೯೮೧-೮೨ರಲ್ಲಿ ೦.೨೭ ಲಕ್ಷ ರೂಪಾಯಿಗಳನ್ನು ಮತ್ತು ೧೯೮೨-೮೩ರಲ್ಲಿ ೧.೫೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಹೆಚ್ಚಿನ ಅಗತ್ಯಬಿದ್ದಾಗ ನಾವು ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ನಿನಪ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಅರಣ್ಯ ಪ್ರದೇಶ ಮತ್ತು ರಸ್ತೆ ಬದಿಯಲ್ಲಿ ಗಿಡ ನೆಡುವುದರ ಬಗ್ಗೆ

ಪ್ರ. ಸಂಖ್ಯೆ ೫೭೦(೧೨೦೬) ಶ್ರೀ ಟಿ. ಹೆಚ್. ಹನುಮಂತರಾಯಪ್ಪ (ಬೆಳ್ಳವಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಅರಣ್ಯ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ೧೯೮೧ ರಿಂದ ಪ್ರತಿವರ್ಷ ಅರಣ್ಯ ಇಲಾಖೆಯವರು ಅರಣ್ಯ ಪ್ರದೇಶ ಮತ್ತು ರಸ್ತೆ ಬದಿಯಲ್ಲಿ ಗಿಡ ನೆಡುವುದಕ್ಕೆ ಖರ್ಚು ಮಾಡಿರುವ ಹಣ ಎಷ್ಟು ?

ಆ) ಈ ಮರಗಳ ಮಾರಾಟದಿಂದ ಇಲಾಖೆಗೆ ಪ್ರತಿವರ್ಷ ಬಂದಿರುವ ಆದಾಯ ಎಷ್ಟು ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಕೊರಟಗೆರೆ ತಾಲ್ಲೂಕಿನಲ್ಲಿ ೧೯೮೧-೮೨ ರಿಂದ ೧೯೮೩-೮೪ರವರೆಗೆ ಅರಣ್ಯ ಪ್ರದೇಶ ಮತ್ತು ರಸ್ತೆ ಬದಿಯಲ್ಲಿ ಗಿಡ ನೆಡುವುದಕ್ಕೆ ಖರ್ಚು ಮಾಡಿರುವ ಹಣದ ವಿವರ ಈ ಕೆಳಕಂಡಂತಿದೆ :

ಸಾಲು	ಖರ್ಚು (ರೂ.ಗಳಲ್ಲಿ)	ಸಾಧಿಸಿದ ಗುರಿ (ಹೆಕ್ಟೇರುಗಳಲ್ಲಿ)
೧೯೮೧-೮೨	೨,೦೨,೦೦೩	೭೧
೧೯೮೨-೮೩	೧,೩೮,೦೦೦	೪೮
೧೯೮೩-೮೪	೩,೩೭,೩೫೦	೯೭

ಆ) ೧೯೮೧-೮೨ ನೇ ಸಾಲಿನಿಂದ ಬೆಳೆಸಿರುವ ಯಾವ ಮರಗಳನ್ನೂ ಮಾರಾಟ ಮಾಡಿರುವುದಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿ ವಿದ್ಯಾವಂತ ಸಹಾಯಕರ ಖಾಯಂಯಾತಿಯ ಬಗ್ಗೆ.

೧೬೬೯ ಶ್ರೀ ಕೆ. ಬಿ. ಮಲ್ಲಪ್ಪ (ಆರಕಲಗೂಡು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆಯಲ್ಲಿರುವ ವಿದ್ಯಾವಂತ ಸಹಾಯಕರ ಸಂಖ್ಯೆಎಷ್ಟು ?

ಆ) ಸೌಡಿಗಳು ಮತ್ತು ಗ್ಯಾಂಗ್‌ಮೆನ್‌ಗಳಂತೆ ವಿದ್ಯಾವಂತ ಸಹಾಯಕರುಗಳನ್ನು ಖಾಯಂಗೊಳಿಸುವ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ದಿನಾಂಕ ೧೫-೬-೮೪ರಲ್ಲಿ ಇರುವಂತೆ ಸುಮಾರು ೫೧೫೮ ವಿದ್ಯಾವಂತ ಸಹಾಯಕರು ಮಜೂರುದಾರಿಗಳು ದಿನಗೂಲಿ ವೇತನದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಆ) ದಿನಗೂಲಿ ಗ್ಯಾಂಗ್ ಮೆನ್‌ಗಳಿಗೆ ಸಂಬಂಧಪಟ್ಟಂತೆ ದಿನಾಂಕ. ೧೫-೬-೮೪ರ ಸರ್ಕಾರೀ ಆದೇಶವು ವಿದ್ಯಾವಂತ ಸಹಾಯಕರು ಮಜೂರುದಾರಿಗಳಿಗೆ ಅನ್ವಯವಾಗುವುದಿಲ್ಲ.

ಪ್ರಮಾಣಿಕ ಶಾಲೆಯ ಹಾಗೂ ಅಂಗವಿಕಲರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯೋಪಧ್ಯಾಯರ ಹಾಗೂ ಪದವೀಧರ ಸಹಾಯಕರುಗಳ ವೇತನ ಶ್ರೇಣಿಯಲ್ಲಿ ತಾರತಮ್ಯವಿರುವ ವಿಚಾರ.

೧೧೬೧ ಶ್ರೀ ಬಸವರಾಜ್ ಪಾಟೀಲ್ (ಹುಮ್ನಾಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಮಾಜಕಲ್ಯಾಣ ಹಾಗೂ ರೇಷ್ಮೆ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಪ್ರಮಾಣಿತ ಶಾಲೆಯ ಹಾಗೂ ಅಂಗವಿಕಲರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮುಖ್ಯೋಪಧ್ಯಾಯರ ಹಾಗೂ ಪಧವೀದರ ಸಹಾಯಕರುಗಳ ವೇತನ ಶ್ರೇಣಿಯಲ್ಲಿ ತಾರತಮ್ಯ ವಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಇಂಥ ತಾರತಮ್ಯಕ್ಕೆ ಕಾರಣವೇನು ?

ಇ) ಯಾವಾದರೂ ಕಿರಿಯ ಸರ್ಕಾರೀ ನೌಕರನಿಗೆ ಅವನ ಹಿರಿಯನಿಗಿಂತ ಹೆಚ್ಚು ವೇತನ ಶ್ರೇಣಿಯನ್ನು ನೀಡಲಾಗಿರುವ ಘಟನೆಗಳಿವೆಯೇ ?

ಈ) ಹೆಚ್ಚಿನ ವಿದ್ಯಾರ್ಹತೆ ಇರುವ ಹಾಗೂ ಒಂದೇ ಬಗೆಯ ಕರ್ತವ್ಯವನ್ನು ನಿರ್ವಹಿಸುತ್ತಿರುವವರಿಗೆ ಬೇರೆ ಬೇರೆ ರೀತಿಯ ವೇತನ ಶ್ರೇಣಿಯನ್ನು ನೀಡಿರುವ ಬಗೆಗೆ ಅನುನಿರಿಸಲಾಗುತ್ತಿರುವ ನೀತಿಗಳು ?

ಉ) ಅಸಮಾನತೆಯನ್ನು ನಿವಾರಿಸುವಲ್ಲಿ ಸರ್ಕಾರ ತಗೆದುಕೊಂಡಿರುವ ಕ್ರಮ.ವೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಶಿಕ್ಷಣ ಇಲಾಖೆಯಲ್ಲಿ ತರಬೇತಿ ಪಡೆದ ಪದವೀದರರಿಗೆ ನೀಡುತ್ತಿರುವ ವೇತನ ಶ್ರೇಣಿಯನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ತರಬೇತಿ ಪಡೆದ ಪದವೀಧರರಿಗೂ ನೀಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ಯೋಜನೆ ನೀರಾವರಿಯಿಂದ ಜಮೀನುಗಳ ಮೇಲೆ ಪರಿಣಾಮ.

೧೪೨೫ ಶ್ರೀ ಆರ್. ವಿ. ಪಾಟೀಲ್ (ಸಾಂದತ್ತಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನಲ್ಲಿ ಸವಳು ಜವಳು ಜಮೀನುಗಳು ಮಲಪ್ರಭಾ ಯೋಜನೆಯಿಂದ ನೀರಾವರಿಯಾಗಿರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ ?

ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.